**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,**

**ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 161/2024 |
| ಸಿ.ಡಬ್ಲೂ | - 08 |
| ಪಿ.ಡಬ್ಲೂ | - 03 |
| ಸಾಕ್ಷಿಯ ಹೆಸರು | - ವಿಜಯಕುಮಾರ ಶೇಖಪ್ಪ ಬಣವಿ |
| ವಯಸ್ಸು | - 37 ವರ್ಷ |
| ಉದ್ಯೋಗ | - ವ್ಯಾಪಾರ |
| ವಾಸ ಸ್ಥಳ | - ನರಗುಂದ |

ದಿನಾಂಕಃ 13/02/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ 1 ನೇ ಆರೋಪಿಯ ಪರಿಚಯವಿದೆ. 2 ನೇ ಆರೋಪಿಯ ಪರಿಚಯ ಇಲ್ಲ. ಚಾಸಾ-1 ನನ್ನ ಹೆಂಡತಿ. ಚಾಸಾ-9 ಮತ್ತು 10 ರವರ ಪರಿಚಯವಿದೆ.

ದಿನಾಂಕಃ 14-12-2020 ರಂದು ನಾನು ಮತ್ತು ಚಾಸಾ-1 ರವರು ನಮ್ಮ ಮೋಟಾರ ಸೈಕಲ್ ಸಂಃ KA-26-S-9489 ನೇದ್ದರಲ್ಲಿ ಹುಣಸಿಕಟ್ಟಿಯಿಂದ ಕಪ್ಪತ್ತ ಮಲ್ಲಯ್ಯನ ದೇವಸ್ಥಾ,ನಕ್ಕೆ ಹೊರಟಿದ್ದು, ತಡಹಾಳ ದಾಟಿದ 2 ಕಿ.ಮೀ. ನಂತರದಲ್ಲಿ ಬೆ.11.00 ಗಂಟೆಗೆ 1 ನೇ ಆರೋಪಿ ತನ್ನ ಮೋಟಾರ ಸೈಕಲ್ ಸಂಃKA-25-HD-1665 ನಲ್ಲಿ ಅತೀ ವೇಗ ಹಾಗೂ ತಪ್ಪಾದ ದಾರಿಯಲ್ಲಿ ಬಂದು ನಮಗೆ ಅಪಘಾತಪಡಿಸಿರುತ್ತಾರೆ. ಸದರಿ ಅಪಘಾತದಿಂದ ನನ್ನ ಬಲಗಾಲಿನ ಹೆಬ್ಬರಳು ಮುರಿದಿರುತ್ತದೆ. ಚಾಸಾ-1 ರವರಿಗೆ ಸಣ್ಣ ಪ್ರಮಾಣದ ಗಾಯಗಳಾಗಿರುತ್ತವೆ. ಚಾಸಾ-9 ರವರಿಗೂ ಸಣ್ಣ ಪ್ರಮಾಣದ ಗಾಯಗಳಾಗಿರುತ್ತವೆ. ನಂತರ ನಾವು ಶಲವಡಿಯ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಲಿಂದ ನವಲಗುಂದದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನಂತರ ಅಲ್ಲಿಂದ

ಹುಬ್ಬಳ್ಳಿಯ ಶಾಕುಂತಲಾ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನಂತರ ಚಾಸಾ-1 ಪೋಲಿಸ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತಾರೆ. ಪೋಲೀಸರು ಪ್ರಕರಣಕ್ಕೆ ಸಂಬಂಧಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ಅಪಘಾತಕ್ಕೆ ಸಂಬಂಧಿಸಿ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್ ವಿ ಎಂ ವಕೀಲರಿಂದಃ**

ನಾವು ಹುಣಸಿಕಟ್ಟೆಯಿಂದ ಕಪ್ಪತ್ತಮಲ್ಲಯ್ಯ ದೇವಸ್ಥಾನಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೋಟಾರ ಸೈಕಲ್ ನ್ನು ಅತೀ ವೇಗದಿಂದ ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ತಡಹಾಳ ಗ್ರಾಮದಿಂದ ಶಲವಡಿ ಗ್ರಾಮಕ್ಕೆ ಹೋಗುವ ರಸ್ತೆ 30 ಫೂಟ್ ಅಗಲವಿರುತ್ತದೆ. ಸದರಿ ರಸ್ತೆ ಸಾಕಷ್ಟು ಅಗಲವಾಗಿರುವುದರಿಂದ ಆರೋಪಿ ತಪ್ಪಾ ದಾರಿಯಲ್ಲಿ ಬಂದ ಅಪಘಾತಪಡಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನನಗೆ ವಾಹನ ಚಲಾಯಿಸಲು ಪರವಾನಿಗೆ ಪತ್ರ ಹಾಗೂ ನನ್ನ ಮೋಟಾರ ಸೈಕಲ್ ಗೆ ವಿಮೆ ಇಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನಗೆ, ಚಾಸಾ-8 ಮತ್ತು 9 ರವರಿಗೆ ಗಾಯಗಳಾಗಿರುತ್ತವೆ. ಸದರಿ ಅಪಘಾತದಲ್ಲಿ ನನಗೆ, ಚಾಸಾ-1 ಮತ್ತು 9 ರವರಿಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿಯಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ಪರಿಹಾರ ಹಣವನ್ನು ಪಡೆಯಲು ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ತಪ್ಪಾದ ದಾರಿಯಲ್ಲಿ ಬರುತ್ತೀರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd**/-

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

ನವಲಗುಂದ.